ECA .3 /2025
ಪಿ.ಡಬ್ಲ್ಯೂ : 02

ದಿನಾಂಕ 18-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-21 | Authorization letter |
| ನಿಪಿ-22 | Notary copy of ID Card |
| ನಿಪಿ-23 | Notary copy of Adharcard |
| ನಿಪಿ-24 | Company Bank Statement ( ನಾವು ಮೃತಪಟ್ಟ ವ್ಯಕ್ತಿಗೆ ಹಣ ಪಾವತಿ ಮಾಡುತಿದ್ದ ಬಗ್ಗೆ ಅದರಲ್ಲಿ ಎಂಟ್ರಿಗಳು ಇರುತ್ತದೆ ) |
| ನಿಪಿ-25 | EPF |
| ನಿಪಿ-26 | ಮೃತಪಟ್ಟ ವ್ಯಕ್ತಿಯ ಶಾಲಾ ದಾಖಲಾತಿಗಳ ಮತ್ತು ಮಾರ್ಕ್ಸ್ ಕಾರ್ಡ್ಸ್ ಗಳ ಪ್ರತಿ |
| ನಿಪಿ-27 ಮತ್ತು 28 | ಮೃತಪಟ್ಟ ವ್ಯಕ್ತಿಯ ಪಾಸ್ ಬುಕ್ ಗಳು |
| ನಿಪಿ-29 | ಮೃತವ್ಯಕ್ತಿಯ ಬ್ಯಾಂಕ್ ಸ್ಟೇಟ್‌ಮೆಂಟ್ |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಪಾಟೀ ಸವಾಲು ಃ ಎದುರುದಾರರ ಪರ ಡಿಬಿಎಸ್ ವಕೀಲರಿಂದ**

ನಾನು ನಮ್ಮ ಕಂಪೆನಿಯಲ್ಲಿ ಅಕೌಂಟೆಂಟ್ ಆಗಿದ್ದೇನೆ. ಸಂಭಳವನ್ನು ಬೇರೆಯವರು ಪಾವತಿಸುತ್ತಾರೆ. ನಮ್ಮ ಕಂಪೆನಿಯಲ್ಲಿ ಒಟ್ಟಿಗೆ 5 ಕ್ರೈನ್ ಇರುತ್ತದೆ . ನಮ್ಮ ಬಳಿ 5 ಜನ ಚಾಲಕರು ಇದ್ದಾರೆ, ಅದರಲ್ಲಿ ಒಬ್ಬರು ಮೃತಪಟ್ಟಿರುತ್ತಾರೆ . ನಮ್ಮ ಬಳಿ Employment Register ಇರುತ್ತದೆ. ಸದ್ರಿ Employment Register ನ್ನು ನಾನು ಹಾಜರುಪಡಿಸಿಲ್ಲ. ನಾವು ಅರುಣ್ ಕುಮಾರ್ ಗೆ ಸಂಭಳ ಮತ್ತು ಇತರೇ ಭತ್ಯೆಗಳನ್ನು ಖಾತೆಗೆ ವರ್ಗಾವಣೆ ಮಾಡುತಿದ್ದೆವು . ಆತನಿಗೆ ರೂ 24000 ಸಂಭಳ ಕೊಡುತಿದ್ದೆವು . ಆತನಿಗೆ ದಿನಕೂಲಿ ಆದಾರದ ಮೇಲೆ ಸಂಭಳ ಕೊಡುತಿದ್ದೆವು . ಒಂದು ದಿನಕ್ಕೆ ರೂ 920/- ಸಂಭಳ. ಆತನಿಗೆ ಒಂದು ದಿನ ಹುಷಾರು ಇಲ್ಲದೇ ಇದ್ದರೂ ಕೂಡ ನಾವು ಆ ದಿನ ಸಂಭಳ ಕೊಡುತ್ತೇವೆ , ಆದರೇ ಆತನೇ ರಜೆ ಹಾಕಿದರೇ ಸಂಭಳ ಕೊಡುವುದಿಲ್ಲ . ಆತ ಎಷ್ಟು ದಿನ ಕೆಲಸ ಮಾಡುತಾನೋ ಅಷ್ಟು ದಿನ ಸಂಭಳ ಕೊಡುತ್ತೇವೆ . ಸಾಕ್ಷಿ ಮುಂದುವರಿದು ಕೆಲಸ ಇರಲೀ ಇಲ್ಲದೇ ಇರಲೀ ಆತ ನಮ್ಮ ಕಂಪೆನಿಗೆ ಬಂದರೇ ಆಗ ನಾವು ಆ ದಿನದ ಸಂಭಳ ಕೊಡುತ್ತೇವೆ . ನಾವು wage register ನ್ನು ಇಟ್ಟಿರುತ್ತೇವೆ ಅದನ್ನು ಹಾಜರುಪಡಿಸಿಲ್ಲ . wage register ನಲ್ಲಿ ಆತ ಎಷ್ಟು ಸಂಭಳ ತೆಗೆದುಕೊಂಡಿದ್ದಾನೇ , ಎಷ್ಟು ಸಂಭಳ ಮತ್ತು ಎಷ್ಟು ದಿನ ಕೆಲಸ ಮಾಡಿದ್ದಾನೇ ಎಂದು ಕಂಡುಬರುತ್ತದೆ ಎಂದರೆ ಸರಿ . ಕೆಲವು ಬಾರಿ ಆತನಿಗೆ ಅಡ್ವಾನ್ಸ್ ಆಗಿ ಕೂಡ ಹಣ ಕೊಡುತಿದ್ದೆವು . ಅಪಘಾತವಾದ ಸಮಯದಲ್ಲಿ ಮೃತನಿಗೆ ಬದುಕಿರುವಾಗ ರೂ 15000 ಸಂಭಳ ಕೊಟ್ಟಿದ್ದೆವು . ಕೊಟ್ಟ ಖಾತೆಯ ಸ್ಟೇಟ್ ಮೆಂಟ್ ನಲ್ಲಿ ಮೃತನು ಬದುಕಿದ್ದಾಗ ಒಂದು ತಿಂಗಳಲ್ಲಿ ರೂ 19000, ಒಮ್ಮೆ 22000 ಒಮ್ಮೆ ರೂ 25000 ಹೀಗೆ ಕಂಡುಬಂದಿದೆ ಎಂದರೆ ಸರಿ .

ಜನವರಿ 2024 ರಲ್ಲಿ ಮೃತ ನಮ್ಮ ಕಂಪೆನಿಗೆ ಕೆಲಸಕ್ಕೆ ಸೇರಿದ್ದ . ಅರುಣ್ ಕುಮಾರ್ ನ್ನು ನಾವು ನಮ್ಮ ಕಂಪೆನಿಗೆ ಖಾಯಂ ನೌಕರನಾಗಿ ತೆಗೆದುಕೊಂಡಿದ್ದೆವು ಮತ್ತು ಆತನಿಗೆ ಗುರುತಿನ ಚೀಟಿ ಕೊಟ್ಟಿದ್ದೆವು . ಮೃತ ಅರುಣ್ ಕುಮಾರ್ ನಮ್ಮ ಕಂಪೆನಿಯ ಖಾಯ

ನೌಕರನಾಗಿರಲಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಷ್ಟು ಆತನಿಗೆ ಸಂಭಳ ಇರಲಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.